**ಇಂದು ದಿನಾಂಕ: 17.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಎನ್.ಕೆ.ವಕೀಲರಿಂದಃ**

ನಾನು ಮತ್ತು ವಾದಿ ಸ್ನೇಹಿತರು ಎಂದರೆ ಸರಿ. ಆದರೆ ಈ ಕೇಸಿನಲ್ಲಿ ಸಾಕ್ಷ್ಯ ಹೇಳಿರುವ ಲಕ್ಷ್ಮೇಗೌಡರು ನಾನು ಸ್ನೇಹಿತರಲ್ಲ, ಪರಿಚಯವಿದ್ದೇವೆ. ಪ್ರತಿವಾದಿ ಎಲ್ಲಿ ವಾಸವಿದ್ದಾರೆ ಎಂದು ಗೊತ್ತಿಲ್ಲ. ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳ ಹೆಸರು ಗೊತ್ತಿಲ್ಲ. ನನ್ನನ್ನು ವಾದಿ ಕರೆದಿದ್ದರು. ವಾದಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅದು ಇದು ಕೆಲಸಗಳನ್ನು ಮಾಡಿಕೊಡುತ್ತಾರೆ. ದಾವಾ ಆಸ್ತಿಯನ್ನು ನಾನು ನೋಡಿಲ್ಲ, ಅದರ ಮಾರುಕಟ್ಟೆ ಮೌಲ್ಯ ನನಗೆ ಗೊತ್ತಿಲ್ಲ. ಮಧ್ಯಾಹ್ನ ಸುಮಾರು 3.30 ರಿಂದ 4.00 ಗಂಟೆಯಲ್ಲಿ ವ್ಯವಹಾರ ಆಗಿತ್ತು. ಅದೇ ದಿನ ನಾನು ಪ್ರತಿವಾದಿಯನ್ನು ಮೊದಲ ಬಾರಿ ನೋಡಿದ್ದೇನೆ.

ನನ್ನ ಸಮಕ್ಷಮ ಪ್ರತಿವಾದಿಗೆ ಚೆಕ್ ಮೂಲಕ ರೂ.2,80,000/- ಹಾಗೂ ರೂ.20,000/- ನಗದು ಹಣ ಕೊಟ್ಟಿರುತ್ತಾರೆ. ಎಷ್ಟು ಮುಖಬೆಲೆಯ ನೋಟುಗಳನ್ನು ಕೊಟ್ಟಿದ್ದಾರೆ ಎಂದು ನೆನಪಿಲ್ಲ. ಕರಾರು ಪತ್ರದಲ್ಲಿ ಬರೆಸಿರುವ ವಿಷಯಗಳು ಗೊತ್ತಿದೆ. ಕರಾರು ಪತ್ರವನ್ನು ಬರೆದುಕೊಡುವಂತೆ ವಾದಿ ವಕೀಲರಿಗೆ ಹೇಳಿದ್ದಾರೆ. ಕರಾರು ಪತ್ರವನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ. SBI ಬ್ಯಾಂಕ್ ಮುಂದೆ ವಾದಿ ಪ್ರತಿವಾದಿಗೆ ರೂ.20,000/- ಹಣವನ್ನು ಕೊಟ್ಟಿದ್ದಾರೆ. ಈ ವ್ಯವಹಾರ ವಕೀಲರ ಕಚೇರಿಯಲ್ಲಿ ನಡೆದಿದೆ. ವಕೀಲರ ಕಚೇರಿಯಿಂದ SBI ಗೆ ಒಂದೂವರೆ ಕಿಮೀ ದೂರವಿದೆ. ವಕೀಲರು ಸಹ ಬ್ಯಾಂಕ್ ಬಳಿ ಬಂದಿದ್ದರು ಅಲ್ಲೆ ಕರಾರು ಪತ್ರಕ್ಕೆ ನಾನು, ವಾದಿ, ಪ್ರತಿವಾದಿ ಮತ್ತು ಲಕ್ಷ್ಮೇಗೌಡರ ಸಹಿ ಮಾಡಿದ್ದೇವೆ. ವಾದಿ ಪ್ರತಿವಾದಿಗೆ ರೂ.20,000/- ಹಣ ಕೊಟ್ಟಿರುವುದನ್ನು ನಾನು ನೋಡಿದ್ದೇನೆ. ನಾನು 10 ನೇ ತರಗತಿ ಓದಿದ್ದೇನೆ.

ಕರಾರು ಪತ್ರವನ್ನು ನೋಡಿ ಸಾಕ್ಷಿಯು ಅದರ ಪ್ರಕಾರ ವಾದಿ ಪ್ರತಿವಾದಿಗೆ ರೂ.3,00,000/- ನಗದು ಕೊಟ್ಟಿರುವುದಾಗಿ ಬರೆಯಲಾಗಿದೆ ಎಂದರೆ ಸರಿ. ರೂ.3,00,000/- ನಗದು ಕೊಟ್ಟಿರುವುದನ್ನು ನಾನು ನೋಡಿಲ್ಲ. ಕರಾರು ಪತ್ರದಲ್ಲಿ ರೂ.3,00,000/- ನಗದು ಎಂದು ಬರೆದಿರುವುದು ಸುಳ್ಳು. ಪ್ರತಿವಾದಿ ದಾವಾ ಆಸ್ತಿಯನ್ನು ಮಾರಾಟ ಮಾಡುವ ಯಾವುದೇ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಸಹಿ ಮಾಡಿರುವ ಕರಾರು ಪತ್ರದಲ್ಲಿ ರೂ.2,80,000/- ಮೊತ್ತಕ್ಕೆ ಚೆಕ್ಕು ಹಾಗೂ ರೂ.20,000/- ನಗದು ಎಂದು ಬರೆದಿಲ್ಲ. ಕರಾರು ಪತ್ರ ಬರೆದಿದ್ದಾರೆ ಎನ್ನಲಾದ ಶ್ರೀ.ಕಾಂತರಾಜು ಎಂಬ ವಕೀಲರ ಕಚೇರಿ ಅಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ವಾದಿಯಿಂದ ಒಂದು ಲಕ್ಷ ರೂಪಾಯಿ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ. ಛಾಪಾ ಕಾಗದವನ್ನು ವಾದಿಯೇ ಬರೆದಿದ್ದಾರೆ. ದಾವಾ ಆಸ್ತಿಯನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ನಾನು ವಾದಿ ಮತ್ತು ಲಕ್ಷ್ಮೇಗೌಡರು ಸೇರಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಗೆ ಚೆಕ್ ಮೂಲಕ ರೂ.2,80,000/- ಹಾಗೂ ನಗದು ಮೂಲಕ ರೂ.20,000/- ಕೊಟ್ಟಿಲ್ಲ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

**ಓ.ಹೇ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**